# ಪ್ರತ್ಯಕ್ಷ ಜ್ಞಾನ-ಪರೋಕ್ಷ ಜ್ಞಾನ





## ಲೇಖಕರ ಪರಿಚಯ

ವಿಶಾಖಪಟ್ಟಣ ಜಿಲ್ಲೆ, ಆಂಧ್ರ ಪ್ರದೇಶದಲ್ಲಿರುವ ಕುಗ್ರಾಮವಾದ ‘ಚಿಂತಲ ಆಗ್ರಹಾರಂ’ ನಿವಾಸಿಗಳಾದ ಈಶ್ವರಮ್ಮ, ಅಪ್ಪಾಜಿಯವರ 6 ನೆಯ ಸಂತಾನ ಡಾ॥ ಪಿ.ಸ್. ಗೋಪಾಲಕೃಷ್ಣ ಚಿಕ್ಕಂದಿನಿಂದಲೇ ಡಾಕ್ಟರ್ ಆಗಿ ಸಮಾಜ ಸೇವೆ ಮಾಡಬೇಕೆಂಬ ತಪನೆ... ಅದಕ್ಕಾಗಿ ಅವಿರತ ಕೃಷಿಯಿಂದ 1996 ರಲ್ಲಿ ಎಮ್.ಬಿ.ಬಿ.ಎಸ್ ಡಾಕ್ಟರ್ ಆಗಿ ಪದವಿ ಪಡೆದು ಅದರ ಜೊತೆ 1995ರಿಂದಲೇ ದ್ಯಾನ, ಆಧ್ಯಾತ್ಮಿಕ ಶಾಸ್ತ್ರದ ಅಧ್ಯಯನ ಪ್ರಾರಂಭಿಸಿ ಸಹ ವಿದ್ಯಾರ್ಥಿಗಳೊಂದಿಗೆ ವಿಶೇಷವಾದ ಪರಿಶೋಧನೆ ಮಾಡಿ ಆರು ವರ್ಷಗಳ ಕಾಲದಲ್ಲೇ ಪರಿಪೂರ್ಣತೆ ಸಾಧಿಸಿ 2003 ರಿಂದ ಮೆಡಿಕಲ್ ಪ್ರಾಕ್ಟೀಸ್ ನೊಂದಿಗೆ “ಧ್ಯಾನದಿಂದ ಸಂಪೂರ್ಣ ಅರೋಗ್ಯ” ಎನ್ನುವ ಅಂಶದ ಮೇಲೆ ನಿರಂತರ ಸಾಧನೆ ಮಾಡಿದರು.

ಭಾರತ ದೇಶವೆಲ್ಲಾ ಮತ್ತು ಮಾರಿಷಿಯಸ್, ದುಬಾಯ್, ಸಿಂಗಪೂರ್, ಮಲೇಷಿಯಾ ದಂತಹ ದೇಶಗಳಿಗೆ ಪರ್ಯಟನೆ ಮಾಡಿ ಧ್ಯಾನ ಜ್ಞಾನ ಬೋಧನೆ ಮಾಡಿದರು. ಕಳೆದ 16 ವರ್ಷಗಳ ಆಧ್ಯಾತ್ಮಿಕ ಅನುಭವದಿಂದ ತಯಾರು ಮಾಡಿದ ಆಧ್ಯಾತ್ಮಿಕ ಮಾತ್ರೆಗಳೂ (350)ಂದಿಗೆ “ಧ್ಯಾನ ಆರೋಗ್ಯ ಶಾಸ್ತ್ರವಿಧಾನ” ತಯಾರಾಯಿತು. ಅನೇಕ “ಪಿರಮಿಡ್ ಧ್ಯಾನ ಆರೋಗ್ಯ ಕೇಂದ್ರಗಳು” ಶುರುವಾಗಿ, ಕೆಲವು ಸಾವಿರ ಮಂದಿ ಸಂಪೂರ್ಣ ಆರೋಗ್ಯ ಹೊಂದುವುದಕ್ಕೆ ಸಹಾಯ ಸಹಕಾರಗಳನ್ನು ನೀಡಿದರು. “ನಿನಿಗೇ ನೀನೇ ವೈದ್ಯನಾಗು” ಎನ್ನುವುದೇ ಇವರ ಪ್ರಧಾನ ನಿನಾದ.



**ಡಾ॥ ಪಿ.ಸ್. ಗೋಪಾಲಕೃಷ್ಣ**
**ವ್ಯವಸ್ಥಾಪಕರು ಧ್ಯಾನ ಆರೋಗ್ಯ**
**www.spiritualtablet.org**

# ಪ್ರತ್ಯಕ್ಷ ಜ್ಞಾನ – ಪರೋಕ್ಷ ಜ್ಞಾನ

ರಚನೆ

## ಡಾ॥ ಪಿ.ಎಸ್. ಗೋಪಾಲಕೃಷ್ಣ M.B.B.S

## ಆಧ್ಯಾತ್ಮಿಕ ಮಾತ್ರೆ

ಈ ಪುಸ್ತಕಕ್ಕೆ ಆರ್ಥಿಕ ಸಹಕಾರ ನೀಡಿದ ನೆಲ್ಲೂರು.
ಪಿರಮಿಡ್ ಮಾಸ್ಟರ್ ಸರೋಜಿನಿಯವರಿಗೆ ಅಭಿನಂದನೆಗಳು

## ಧ್ಯಾನ ಆರೋಗ್ಯದ ಪ್ರಕಟನೆಗಳು

**ಪ್ರಥಮ ಮುದ್ರಣ(ಕನ್ನಡ):** ಮೇ 2015

**ಪ್ರತಿಗಳು:** 1000

**ಬೆಲೆ:** ರೂ 6/–

**ರಚನೆ:** ಡಾ॥ ಪಿ.ಎಸ್. ಗೋಪಾಲಕೃಷ್ಣ, M.B.B.S

**ಮುದ್ರಿಸಿದವರು:** ಪಿರಮಿಡ್ ರಿಯಲ್ ರಿಲೀಫ್ ಸೆಂಟರ್
D.no.17-1-15, Chamber-13,
R.R. Towers, K.G.H ರೋಡ್,
ಮಹಾರಾಣಿ ಪೇಟ, ವಿಶಾಖಪಟ್ಟಣ.
ಫೋನ್: +91 92466 48401

**ಮುದ್ರಣ:** ಶ್ರೀದೇವಿ ಪ್ರಿಂಟರ್ಸ್, B-8 ಯೂನಿಟ್,
ಇಂಡಸ್ಟ್ರಿಯಲ್, ವಿಶಾಖಪಟ್ಟಣ
ಫೋನ್: 2528483 (0891)

# ಮುನ್ನಡಿ

ನಿತ್ಯ ಜೀವನದಲ್ಲಿ ಕಲಿಯುವ ಭಾಗವಾಗಿ ನಮಗೆ ಎದುರಾಗುವ ಅನೇಕಾನೇಕ ಸಂಘಟನೆಗಳಲ್ಲಿರುವ ದ್ವಂದ್ವಗಳನ್ನು, ಒಬ್ಬ ಭಗವಂತನು ಆ ಕ್ಷಣದಲ್ಲಿ ಆ ಪರಿಸ್ಥಿತಿಗಳಲ್ಲಿ ಜೀವಿಸಿದರೆ ಹೇಗೆ ವ್ಯವಹರಿಸುತ್ತಾನೆ; ಎನ್ನುವುದು ನಾವು ಸಂಕ್ಷಿಪ್ತವಾಗಿ ಅರ್ಥವಾಡಿಕೊಂಡು ಅದೇ ವಿಧವಾಗಿ ನಮ್ಮನ್ನು ನಾವು ರೂಪಿಸಿಕೊಂಡಾಗ ಆರೋಗ್ಯಮಯ ಆನಂದಮಯ ಜೀವನದಲ್ಲಿ ಹೆಜೆ ಜಇಟ್ಟಂತೇಯ ಸರಿ!

ಆದರೆ ಒಂದಾನೊಂದು ಸಂದರ್ಭದಲ್ಲಿ "ಸ್ವಾನುಭವ" ದೊಂದಿಗೆ ಇರಬೇಕೆ ಅಥವಾ ಇತರ ಪದ್ಧತಿಗಳಲ್ಲಿ ಜ್ಞಾನ ಹೊಂದಬೇಕೆ ಎನ್ನುವ ಉಹಾ ಪೋಹಗಳನ್ನು ದೂರ ಮಾಡಲು ಈ ಅಂಶ ಸವಿವರವಾಗಿ ಎರಡು ಮಾತ್ರೆಗಳ ಕ್ರಮದಲ್ಲಿ ತಯಾರಿಸಲಾಗಿದೆ. ಇದನ್ನು ಓದಿ ಅನುಭವಜ್ಞಾನ ಹೊಂದುವ ವಿಧಾನದಲ್ಲಿ ಇರುವ ದ್ವಂದ್ವವನ್ನು ಮೆಚ್ಚಿಬೇಕು ಎನ್ನುವುದೇ ನಮ್ಮ ಆಶಯ!

ಧ್ಯಾನ ಆರೋಗ್ಯ ಶಾಸ್ತ್ರವಿಧಾನ ದಿಂದ ಈ ಆಧ್ಯಾತ್ಮಿಕ ವಿಷಯಗಳನ್ನು ತಿಳಿಸುವ ಅವಕಾಶವನ್ನು ನೀಡಿದ ಓದುಗರಿಗೆ ನನ್ನ ಕೃತಜ್ಞತೆಗಳು.

ಜೀವನ ಮಾತ್ರೆಯಲ್ಲಿ ನನಗೆ ಜನ್ಮ ನೀಡಿದ ತಂದೆ ತಾಯಿಗೆ ಭೌತಿಕವಾಗಿ ಅನುಕ್ಷಣ ಆಧ್ಯಾತ್ಮಿಕ ಶಾಸ್ತ್ರವನ್ನು ಕೈತುತ್ತಿನಂತೆ ತಿನ್ನಿನೆ ನನ್ನನ್ನು ತಿದ್ದಿ ತೀಡಿದ ಪಿ. ವಿಜಯಕುಮಾರ್ ರವರಿಗೆ, ಎಂತೆಂತಹ ಕಲ್ಲುಗಳನ್ನೋ ಧ್ಯಾನ ರತ್ನಗಳಂತೆ ತಿದ್ದಿತೀಡಿದ, ಈ ಪ್ರಾಜೆಕ್ಟ್ ನಿರ್ಮಾಣದಲ್ಲಿ ಅನುನಿತ್ಯ ತಕ್ಕ ಸೂಚನೆಗಳನು ನೀಡಿದ "ಬ್ರಹ್ಮರ್ಷಿ ಪತ್ರೀಜಿ" ಯವರಿಗೆ ನನ್ನ ಆತ್ಮ ಪ್ರಣಾಮಗಳು.

**ಡಾ.ಜಿ.ಕೆ**

**ವ್ಯವಸ್ಥಾಪಕ ಅಧ್ಯಕ್ಷರು, ಧ್ಯಾನ ಆರೋಗ್ಯ**

# ವಿಷಯಾನು ಕ್ರಮಣ


1. ಪ್ರತ್ಯಕ್ಷ ಜ್ಞಾನ – ಪರೋಕ್ಷಜ್ಞಾನ..........................5

2. ಅವರಿಗೇ ಅವರೇ ಸಾಕ್ಷಿ(ತಮಗೆ ತಾವೇ)................12

3. ಸೋಲ್ ಸ್ಕಾನಿಂಗ್ (ಆತ್ಮದ ಪರಿವೀಕ್ಷಣೆ) ..................17

4.ಅನುಭವಗಳು..................................................22

5.ಅನುಬಂಧ.....................................................28

# ಪ್ರತ್ಯಕ್ಷ ಜ್ಞಾನ – ಪರೋಕ್ಷ ಜ್ಞಾನ

ಪ್ರತ್ಯಕ್ಷ ಜ್ಞಾನ, ಪರೋಕ್ಷ ಜ್ಞಾನವೆನ್ನುವ ಈ ಎರಡೂ ಪರಸ್ಪರ ವಿರುದ್ಧ ಅಂಶಗಳು ಎರಡು ಟಾಬ್ಲೆಟ್‌ಗಳು ಎನ್ನುವ ಮಾಪನಾಂಕದಿಂದ ಆತ್ಮ ವೈಕಲ್ಯಕ್ಕೆ ಅಗತ್ಯವಾಗುವ ಸಾಧನಾ ಯೋಜನೆಗಳಾಗಿ ಇವುಗಳನ್ನು ಈ ಚಿಕ್ಕ ಪುಸ್ತಕದಲ್ಲಿ ವಿವರಿಸಲಾಗುತ್ತಿದೆ.

ಈ ಆಧ್ಯಾತ್ಮಿಕ ಸೂತ್ರದ ಬಗ್ಗೆ ತಿಳಿದುಕೊಳ್ಳುವ ಮುಂಚೆ ಒಂದು ಚಿಕ್ಕ ಕಥೆಯನ್ನು ನಾವು ತಿಳಿದುಕೊಳ್ಳಬೇಕು. ಒಂದು ಊರಿನಲ್ಲಿ ಒಬ್ಬ ವ್ಯಕ್ತಿಯ ಮೂಗಿನ ತುದಿಯು ತುಂಡಾಯಿತು, ಆಗ ಆ ವ್ಯಕ್ತಿ "ಶ್ರೀ ಮಹಾವಿಷ್ಣು ನನಗೆ ದೇದೀಪ್ಯಮಾನವಾಗಿ ಕಾಣಿಸುತ್ತಿದ್ದಾರೆ! ಏಕೆಂದರೆ ಈ ಮೂಗಿನ ತುದಿಯೆನ್ನುವುದು ಎರಡು ಕಣ್ಣಿಗೆ ಅಂದರೆ, ಚರ್ಮಚಕ್ಷುಗಳಿಗೆ ಅಡ್ಡವಾಗುವುದರಿಂದ ಒಂದಾನೊಂದು ಪಾಯಿಂಟ್ ಅಥವಾ ಬಿಂದುವನ್ನು ಮಾತ್ರ ನಾವು ದರ್ಶಿಸಲಾರೆವು. ಯಾವಾಗ ಮೂಗಿನ ತುದಿ ತುಂಡಾಗುತ್ತದೋ ಆಗ ಆ ಬಿಂದುವನ್ನು ನೋಡಲು ದರ್ಶಿಸಬಲ್ಲೆವು. ಯಾವುದಾದರೂ ಬಿಂದು ಕಣ್ಣಿಗೆ ಅಡ್ಡಬರುವುದರಿಂದ ಕಾಣಿಸುವುದಿಲ್ಲವೋ, ಆ ಸ್ಥಾನದಲ್ಲಿ ಮಾತ್ರವೇ ಶ್ರೀ ಮಹಾವಿಷ್ಣು ಇದ್ದಾರೆ, ಅದಕ್ಕೆ ನಾನು

ನೋಡಲಾಗುತ್ತಿದೆ" ಎನ್ನುವ ಒಂದು ಲಾಜಿಕ್‌ನ್ನು ಉಪಯೋಗಿಸಿ ಆ ವ್ಯಕ್ತಿ ಮತ್ತಷ್ಟು ಜನರಿಗೆ ಮೂಗು ತುಂಡರಿಸುವಂತೆ ಮಾಡಿದ. ಆಗ ಅವರು "ನಮಗೆ ಅದ್ಭುತವಾಗಿ, ದೇದೀಪ್ಯಮಾನವಾಗಿ ಶ್ರೀ ಮಹಾವಿಷ್ಣು ಕಾಣಿಸುತ್ತಿದ್ದಾರೆ ಎಂದು ಹೇಳುವುದರೊಂದಿಗೆ ಮತ್ತೆ ಕಥೆ ಶುರುವಾಯಿತು. ಹೀಗೆ ಹತ್ತು, ನೂರು, ಐದು ನೂರು, ಸಾವಿರ ಜನಕ್ಕೆ ಮೇಲೆ ಮೂಗು ತುಂಡಾದವರು, "ಏಕ ಕಂಠದಿಂದ ನಮಗೆ ಹಾಲಕಡಲಿನಲ್ಲಿ ಮಹಾಲಕ್ಷ್ಮಿಯೊಂದಿಗೆ ಶ್ರೀಮಹಾವಿಷ್ಣು ಕಾಣಿಸುತ್ತಿದ್ದಾರೆ" ಎಂದು ಹೇಳುವುದರೊಂದಿಗೆ ವಿಷಯ ಕ್ರಮೇಣ ಮಹಾ ರಾಜರಿಗೆ ತಿಳಿಯಿತು. ಆಗ ಅವರೂ ಸಹ "ಮಹಾವಿಷ್ಣುವಿನ ದರ್ಶನ ಭಾಗ್ಯವಾದರೆ ಈ ರಾಜ್ಯವೇಕೆ? ಭೋಗವೇಕೆ? ಯುದ್ಧಗಳೇಕೆ?" ಎಂದು ರಾಜನೂ ಮೂಗಿನ ತುದಿ ಕತ್ತಿರಿಸಿಕೊಳ್ಳಲು ಮುಂದಾದರಂತೆ!

ಆದರೆ ಆ ರಾಜ್ಯದ ಮಂತ್ರಿ ತುಂಬಾ ಬುದ್ಧಿವಂತ ವ್ಯಕ್ತಿ. ಆತ ಮಹಾ ರಾಜನೊಂದಿಗೆ, "ಆರ್ಯ! ಯಾವ ಪುರಾಣದಲ್ಲೂ, ಇತಿಹಾಸದಲ್ಲೂ ಎಲ್ಲೂ ಕೂಡಾ ಮೂಗು ಕತ್ತರಿಸಲ್ಪಟ್ಟರೆ ಭಗವಂತನ ದರ್ಶನವಾಗುತ್ತದೆ ಎನ್ನುವ ವಿಷಯದ ಪ್ರಸ್ತಾವನೆ ಇಲ್ಲ, ಯಾವುದಾದರೂ ಶಂಖದಿಂದ ಬಂದರೇನೆ ತೀರ್ಥವಲ್ಲ. ಎಲ್ಲೂ ಹೇಳಿರದ ವಿಷಯವನ್ನು

ಒಂದು ವ್ಯಕ್ತಿ ಅಥವಾ ಸಮೂಹದಿಂದ ನಾವು ಪರಿಗಣನೆಗೆ ತೆಗೆದುಕೊಂಡು ಆಚರಿಸುವುದು ತಪ್ಪು". ಎಂದು ಎಷ್ಟು ಹೇಳಿದರೂ ಕೇಳದೆ ಇದ್ದುದ್ದರಿಂದ, ಮಂತ್ರಿ ಕೂಡ ತ್ಯಾಗ ಮಾಡಲು ಸಿದ್ಧನಾಗಿ "ಸರಿ ಮೊದಲು ನನ್ನ ಮೂಗನ್ನು ಕೊಯ್ದುಕೊಂಡು ಗಮನಿಸುತ್ತೇನೆ, ಒಂದು ವೇಳೆ ನನಗೆ ಭಗವಂತನ ದರ್ಶನವಾದರೆ, ನೀವು ನಿಮ್ಮ ಮೂಗು ಕೊಯ್ದುಕೊಳ್ಳಿ, ಇಲ್ಲದ ಪಕ್ಷದಲ್ಲಿ ಈ ಸಾವಿರ ಜನ ಸುಳ್ಳುಗಾರರಿಗೆ "ಗಲ್ಲುಶಿಕ್ಷೆ ಕೊಡಿ" ಎಂದು ಎಚ್ಚರಿಕೆಯನ್ನು ಕೊಟ್ಟು ಅದಕ್ಕೆ ಒಂದು ದಿನವನ್ನು ನಿರ್ಣಯಿಸಿದರು.

ಆ ದಿನ ಮಂತ್ರಿ ತನ್ನ ಮೂಗು ಕೊಯ್ದುಕೊಂಡು ಈ ವಿಷಯದಲ್ಲಿ ಇರುವ ಸತ್ಯವನ್ನು ಅರಿಯುವ ದಿನ. ಆ ರಾಜ್ಯದಲ್ಲಿನ ಅನೇಕ ಸಾವಿರ ಜನರು ಒಂದು ಪ್ರಾಂಗಣದಲ್ಲಿ ಸೇರಿದ್ದಾರೆ. ಆಗ ಮಂತ್ರಿ ಆ ಸಾವಿರಾರು ಮಂದಿಯನ್ನು ಉದ್ದೇಶಿಸಿ 'ನನಗೆ ಮೂಗು ಕೊಯ್ದ ನಂತರ ಭಗವಂತನು ಕಾಣಿಸದಿದ್ದರೆ ನಿಮಗೆಲ್ಲರಿಗೂ ಶಿರಚ್ಛೇದನವಾಗುತ್ತದೆ! ಎಂದು ಹೇಳಿದರೂ ಅವರು ಎಷ್ಟು ಮಾತ್ರ ಕೇಳದೆ, ಏಕ ಕಂಠದೊಂದಿಗೆ "ನಾವು ಭಗವಂತನನ್ನು ನೋಡಿದ್ದೇವೆ. ನಮ್ಮನ್ನು ನೀವು ಸಾಯಿಸಿದರೆ ನಾವು ಕೈಲಾಸಕ್ಕೆ ಹೋಗುತ್ತೇವೆ. ಆದರೆ ನಿಮಗೆಲ್ಲರಿಗೂ ದೇವರನ್ನು ತೋರಿಸಲು ನಾವಿಲ್ಲಿದ್ದೇವೆ" ಎಂದು ಹೇಳಿದ್ದರಿಂದ, ಇನ್ನು

ತಪ್ಪುವುದಿಲ್ಲ ಎಂದು ಮಂತ್ರಿ ತನ್ನ ಮೂಗನ್ನು ಕೊಯ್ದುಕೊಂಡನು.

ಹೀಗೆ ಎಲ್ಲರ ಸಮಕ್ಷದಲ್ಲಿ ಮೂಗು ಕೊಯ್ದುಕೊಂಡ ನಂತರ ಮಂತ್ರಿಗೆ ಯಾವ ವಿಧವಾದ ಭಗವಂತನ ಸಾಕ್ಷಾತ್ಕಾರ ಲಭಿಸಲಿಲ್ಲ. ಆಗ ಸಾವಿರ ಮಂದಿಯಲ್ಲಿ ಒಬ್ಬನು ಬಂದು "ಮಂತ್ರಿವರ್ಯರೆ ನಮ್ಮಲ್ಲಿ ಒಬ್ಬನಿಗೆ ಮೊಟ್ಟಮೊದಲು ಮೂಗು ಕತ್ತರಿಸಿತು, ಹತ್ತು ಮಂದಿ ಆತನನ್ನು ಅನುಸರಿಸಿದರು, ಏಕೆಂದರೆ ಹತ್ತು ಮಂದಿ ಅವನನ್ನು ಗೇಲಿ ಮಾಡುತ್ತಾರೆ ಎನ್ನುವ ಭಯದಿಂದ ಆತ ಸುಳ್ಳು ಹೇಳಿದ, ಆದರೆ ಆ ಹತ್ತು ಮಂದಿ ಇನ್ನೂ ಕೆಲವರನ್ನು ಕುರಿಗಳನ್ನಾಗಿ ಮಾಡಿದರು, ಹೀಗೆ ಸಾವಿರಾರು ಜನರನ್ನು ಮಾಡಿದ್ದಾರೆ. ನೀವು ಈಗ ದೇವರು ಕಾಣಿಸುತ್ತಿದ್ದಾರೆ ಎಂದು ಒಂದು ಮಾತು ಹೇಳಿದರೆ ಆ ಮಾತಿಗೆ ರಾಜನ ಮೂಗು ಕತ್ತರಿಸಲ್ಪಡುತ್ತದೆ. ಇನ್ನು ರಾಜ್ಯದಲ್ಲಿ ಯಾರಿಗೂ ಮೂಗು ಇರುವುದಿಲ್ಲ. ನಂತರ 'ಬಕರಾ'ಗಳನ್ನು ಮಾಡುವ ಸಂಘಟನೆಯಿಂದ ನಾವು ಹೊರಬೀಳಬಹುದು" ಎಂದು ಮಂತ್ರಿಗೆ ಹೇಳಿದನು. ಮಂತ್ರಿ ಒಂದು ಜವಾಬ್ದಾರಿಯಿರುವ ಪದವಿಯಲ್ಲಿ ಇರುವ ವ್ಯಕ್ತಿಯಾದ್ದರಿಂದ ಕೂಡಲೇ ಮಹಾರಾಜರೊಂದಿಗೆ,

"ಮಹಾರಾಜ ನಾನು ಹೇಳಿದೆ ನೀವು ಕೇಳಲಿಲ್ಲ, ನನಗೆ ಎಂತಹ ದೇವರು ಕಾಣಲಿಲ್ಲ, ಇದು ಕೇವಲ ಕಲ್ಪನೆ" ಎಂದು ಹೇಳುವುದರೊಂದಿಗೆ ಆ ನಾಟಕಕ್ಕೆ ಪರದೆ ಬಿತ್ತು.

ಅದೇ ದಿನ ರಾತ್ರಿ ಮಂತ್ರಿ ಮಹಾರಾಜನಿಗೆ ಈ ವಿಧವಾಗಿ ಹೇಳಿದನಂತೆ, "ರಾಜಾ! ಸತ್ಯ ದರ್ಶನಕ್ಕೆ ಎರಡು ಮಾರ್ಗಗಳು ಇವೆ. ಅವು 1. ಪ್ರತ್ಯಕ್ಷ ಜ್ಞಾನ 2. ಪರೋಕ್ಷ ಜ್ಞಾನ. ಪ್ರತ್ಯಕ್ಷ ಜ್ಞಾನವನ್ನು ಬಿಡಿಸಿದರೆ 'ಪ್ರತಿ+ಅಕ್ಷ+ಜ್ಞಾನ' ಎಂದರೆ ಪ್ರತ್ಯಾಕ್ಷ ಜ್ಞಾನ. ಪ್ರತಿ ಎಂದರೆ ಎದುರಲ್ಲಿ, ಅಕ್ಷ ಎಂದರೆ ಕಣ್ಣು, ಜ್ಞಾನ ಎಂದರೆ ಆತ್ಮಜ್ಞಾನ, ಪರೋಕ್ಷ ಎಂದರೆ 'ಪರ+ಇತರ+ಅಕ್ಷ' ಅಂದರೆ ನಾವು ಕಂಡಿದ್ದು ಅಲ್ಲದೇ ಇತರರ ಮೂಲಕ, ಇತರ ವಿಧಾನಗಳ ಮೂಲಕ ಜ್ಞಾನವನ್ನು ನಾವು ಹೊಂದುತ್ತೇವೋ, ಅದನ್ನು 'ಪರೋಕ್ಷ ಜ್ಞಾನ' ಎನ್ನುತ್ತಾರೆ ಎಂದು ಹೇಳಿದನು.

"ಆತ್ಮಕ್ಕೆ ಸಂಬಂಧಿಸಿದ ವಿಷಯಗಳನ್ನು ಇತ್ತ ಪ್ರತ್ಯಕ್ಷ ಜ್ಞಾನದಿಂದಲೂ, ಅತ್ತ ಪರೋಕ್ಷ ಜ್ಞಾನದಿಂದಲೂ ನಾವು ಹೊಂದಬೇಕು ಅಷ್ಟೇ ಹೊರತು, ಪ್ರತಿಯೊಂದು ವಿಷಯವನ್ನು ಸ್ವಾನುಭವದಿಂದಲೇ ತಿಳಿದುಕೊಳ್ಳುತ್ತೇನೆ ಎಂದುಕೊಂಡರೆ ಅದರಿಂದ ಯಾವಾಗಲೂ ಪೂರ್ಣವಾಗಿ ತಿಳಿದುಕೊಳ್ಳಲಾರೆವು. ಅದೇ ವಿಧವಾಗಿ ಯಾವಾಗಲೂ

ಇತರರಿಂದ ಮಾತ್ರ ತಿಳಿದುಕೊಳ್ಳುತ್ತೇನೆ ಎಂದರೆ ಅದು ಸಾಧ್ಯವಿಲ್ಲ. ಈ ವಿಷಯವು ಇನ್ನೂ ವಿವರವಾಗಿ ಹೇಳಬೇಕೆಂದರೆ ಒಂದು ಚಿಕ್ಕ ಉದಾಹರಣೆ..

“ 'ಸಿಹಿ' ಎನ್ನುವುದು ಯಾವ ವಿಧವಾಗಿ ಇರುತ್ತದೆ, ಎನ್ನುವುದು ತಿಳಿದುಕೊಳ್ಳಬೇಕೆಂದುಕೊಂಡರೆ ನಮ್ಮ ನಾಲಿಗೆ ಮೇಲೆ ಸಿಹಿ ಇದ್ದರೇನೆ ತಿಳಿಯುತ್ತದೆ. ಯಾವುದು ಸಿಹಿ ವಸ್ತು ಎಂದು ಕೇಳಿದಾಗ ಇತರರ ಅನುಭವದಿಂದ ಅದು ಬಂದು ಜಾಂಗೀರ್, ಕಾಜಾ, ಕೋವಾದಲ್ಲಿನ ಸಿಹಿಯ ವಸ್ತು ಎಂದು ನಾವು ಹೇಳಬಹುದು. ಆದರೆ ಅದರ ರುಚಿಯನ್ನು ನಾವು ಸವಿದಾಗಲೇ ಅದರ ಬಗ್ಗೆ ಹೇಳಲು ಸಾಧ್ಯ. ಏಕೆಂದರೆ ಅದರ ಅನುಭೂತಿಯನ್ನು ನಾವು ಹೊಂದಿರುತ್ತೇವೆ. ಅದೇ ವಿಧವಾಗಿ ಆಧ್ಯಾತ್ಮಿಕ ವಿಷಯಗಳು ಯಾವುದು ಇತರ ವ್ಯಕ್ತಿಗಳಿಂದ ಕೇಳಿ ನಾವು ತಿಳಿದುಕೊಂಡು ಆಚರಣೆಯಲ್ಲಿ ಇಡುವುದರಿಂದ ಅದು ನಮ್ಮ ಅನುಭವಕ್ಕೆ ಬರುತ್ತವೋ ಅವುಗಳನ್ನು ಕೇಳಿದಮೇಲೆ ಮಾತ್ರವೇ ಅವುಗಳನ್ನು ಪರಿಗಣಿಸಬೇಕು.”

ಅಂದರೆ ಪರೋಕ್ಷ ಜ್ಞಾನದಿಂದ ಬರುವ ಜ್ಞಾನ ಅದರಿಂದಲೇ ಬರಬೇಕು. ಯಾವ ವಿಷಯವಾದರೆ ಆತ್ಮಾನುಭವ ಎನ್ನುತ್ತೇವೋ ಅದು ಗತ ಜನ್ಮಗಳ ಒಂದು

ಸಾರ, ಮೂರನೆಯ ಕಣ್ಣಿನಿಂದ ಹೊಂದುವ ಅನುಭವದಿಂದಾಗಲಿ, ಸೂಕ್ಷ್ಮ ಶರೀರಯಾನದಿಂದಾಗಲಿ, ಇಂತಹ ವಿಷಯುಗಳನ್ನು ಸ್ವಾನುಭವದಿಂದ ನಾವು ಅನುಭವಿಸಿದಾಗ ಮಾತ್ರವೇ ನಮಗೆ ಅವುಗಳ ಕುರಿತು ಪೂರ್ತಿ ಜ್ಞಾನ ತಿಳಿಯುತ್ತದೆ. ಆದ್ದರಿಂದ ಇತ್ತ ಆಧ್ಯಾತ್ಮಿಕ ಶಾಸ್ತ್ರವನ್ನು ಪುಸ್ತಕಗಳಿಂದ, ಇತರರ ಅನುಭವಗಳಿಂದ ನಾವು ತಿಳಿದುಕೊಳ್ಳುವುದು... 'ಪರೋಕ್ಷ ಜ್ಞಾನ'ವಾಗಿಯೂ, ಧ್ಯಾನ ಮಾಡಿ ಆತ್ಮ ಸ್ಥಿತಿಯನ್ನು ನಮಗೆ ನಾವು ತಿಳಿದುಕೊಂಡು ಆ ವಿಶ್ವ ಶಕ್ತಿಯನ್ನು ಹೊಂದುವುದು, ಮೂರನೆಯ ಕಣ್ಣಿನ ಅನುಭವಗಳನ್ನು ಹೊಂದುವುದು, ನಮ್ಮಲ್ಲಿ ಶಕ್ತಿ ಪ್ರವಹಿಸಿ ನಾಡೀಮಂಡಲ ಶುದ್ಧಿಯಾಗಿ ರೋಗವನ್ನು ಕಡಿಮೆ ಮಾಡಿಕೊಳ್ಳುವಂತಹ ಅನೇಕ ಅನುಭವಗಳನ್ನು ಸ್ವಾನುಭವದಿಂದ ತಿಳಿದುಕೊಳ್ಳುವಿಕೆಯನ್ನು 'ಪ್ರತ್ಯಕ್ಷ ಜ್ಞಾನ'ವಾಗಿಯೂ ಅರ್ಥೈಸಿಕೊಳ್ಳಬಹುದು. ಇದನ್ನು ಎರಡು ವಿಷಯಗಳಾಗಿ ಪ್ರತಿಯೊಬ್ಬರು ಗಮನಿಸಬೇಕು.

# "ಅವರಿಗೆ ಅವರೇ ಸಾಕ್ಷಿ"

ನಮ್ಮ ಸಮಾಜದಲ್ಲಿ ನಾವು ಒಂದು ವಿಷಯವನ್ನು ಗಮನಿಸಿದರೆ ಆಧ್ಯಾತ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ ಬಹಳಾ ಜನ 'ಸಾಕ್ಷಿ' ಏನು ಎಂದು ಶಾಸ್ತ್ರಜ್ಞರು ಕೇಳುತ್ತಾರೆ. ನಾವು ಇದನ್ನು ತುಂಬಾ ಸಾರಿ ಗಮನಿಸಿರುತ್ತೇವೆ. ನಿಜ ಹೇಳಬೇಕೆಂದರೆ ಅವರಿಗೆ ಅವರೇ ಸಾಕ್ಷಿಯಾಗಬೇಕು, ನೋಡಿಕೊಳ್ಳಬೇಕು. ಎಷ್ಟೋ ಸಾವಿರ ಜನ ವ್ಯಕ್ತಿಗಳ ಆಧ್ಯಾತ್ಮಿಕ ಪ್ರಗತಿ, ಅದರಿಂದ ಅವರಲ್ಲಿ ಬಂದಿರುವಂತಹ ಆನಂದವನ್ನು ಪರೋಕ್ಷವಾಗಿ ನಾವು ತಿಳಿಸಬಲ್ಲೆವು. ಆದರೆ ಪ್ರತ್ಯಕ್ಷವಾಗಿ ಇದು ಎಲ್ಲಿಯವರೆಗೂ ಸರಿ? ಎನ್ನುವ ಪ್ರಶ್ನೆ ಬಂದರೆ, ಅವರು ಸ್ವಾನುಭವದ ಮುಖೇನ ತಿಳಿದುಕೊಳ್ಳಬೇಕು! ಅವರಿಗೆ ಯಾರು ಖಚಿತ ಮಾಡಿಸಲಾರರು. ಅದಕ್ಕೆ ಎಲ್ಲಿ ಶಾಸ್ತ್ರ (ವಿಜ್ಞಾನ) ಅಂತ್ಯವಾಗುತ್ತದೋ ಅಲ್ಲಿ ಆಧ್ಯಾತ್ಮಿಕ ಜ್ಞಾನ ಮೊದಲಾಗುತ್ತದೆ ಎಂದು ಎಷ್ಟೋ ಜನ ಆಧ್ಯಾತ್ಮಿಕ ಶಾಸ್ತ್ರಜ್ಞರು ಹೇಳುವುದನ್ನು ಕೇಳಿದ್ದೇವೆ. ಪ್ರತ್ಯಕ್ಷವಾಗಿ ನಿರೂಪಿಸುವಿಕೆ ಎನ್ನುವುದು ಪ್ರಾಪಂಚಿಕ ಪರಿಧಿಯೊಂದಿಗೆ ಕೂಡಿಕೊಂಡಿರುವಂತಹ ಅರಿವು. ಆತ್ಮದ ಸ್ಥಾಯಿಗೆ ಬಂದಾಗ, ಕೆಲವು ವಿಷಯಗಳನ್ನು ಅವರಿಗೆ ಅವರೇ ಸ್ವಾನುಭವದಿಂದ ತಿಳಿದುಕೊಂಡಾಗ ಮಾತ್ರವೇ ಅವರಿಗೆ ಅವರು ಅರ್ಥಮಾಡಿಕೊಳ್ಳುತ್ತಾರೆ

ಹೊರತು ಇತರರಿಂದ ಅದನ್ನು ಅರ್ಥಮಾಡಿಸಲು ಸಾಧ್ಯವಿಲ್ಲ. ಆದ್ದರಿಂದ ಸಾಧನಾ ಮಾರ್ಗದಲ್ಲಿ ಸಾಧನೆ ಮಾಡಿ ನಮಗಿರುವ ಅನಾರೋಗ್ಯಗಳನ್ನು ಕಡಿಮೆಗೊಳಿಸಿ ಆನಂದದಿಂದ ಜೀವಿಸುತ್ತಿರುವ ಸಮಯದಲ್ಲಿ ಯಾರಾದರೂ ನಮಗೆ ಪ್ರಶ್ನೆ ಹಾಕಿದಾಗ ಅಥವಾ ನಿರೂಪಣೆ ಮಾಡಬೇಕಾಗಿ ಬಂದರೆ, ವಿಷಯ ಪ್ರತ್ಯಕ್ಷ ಜ್ಞಾನಕ್ಕೆ ಸಂಬಂಧಿಸಿದ್ದಾದರೆ ನಾವು ಅವರಿಗೆ "ಧ್ಯಾನ ಮಾಡಿ ತಿಳಿದುಕೊಳ್ಳಿ" ಎಂದು ಹೇಳಬೇಕು. ಒಂದು ವೇಳೆ ಪರೋಕ್ಷ ಜ್ಞಾನದಿಂದ ತಿಳಿದುಕೊಳ್ಳಬೇಕಾದ ವಿಷಯವಾದರೆ, ಆಗ ನಮ್ಮ ಅನುಭವ ಜ್ಞಾನವನ್ನು ಅವರಿಗೆ ವಿವರವಾಗಿ ಹೇಳಬಹುದು. ತರ್ಕದೊಂದಿಗೆ ಕೂಡಿಕೊಂಡಿರುವಂತಹ ಪ್ರಶ್ನೆಗಳು ಹಾಕಿ ನಮ್ಮ ಸಮಯವನ್ನು ವ್ಯರ್ಥಮಾಡುವಂತೆ, ಸ್ವಾನುಭವವನ್ನು ಹೊಂದಲು ಇಷ್ಟವಿಲ್ಲದಂತೆ ಇರುವ ವ್ಯಕ್ತಿಗಳನ್ನು ನಾವು ಪೂರ್ತಿಯಾಗಿ ದೂರ ಇರಿಸಬೇಕು. ಆಗ ಮಾತ್ರ ನಾವು ಚೈತನ್ಯವನ್ನು, ನಮ್ಮ ಆನಂದವನ್ನು ಪರಿರಕ್ಷಿಸಿಕೊಳ್ಳಬಲ್ಲೆವು. ಆದ್ದರಿಂದ ಇಲ್ಲಿ 'ಸೋಲುವಿಕೆ' ಎನ್ನುವುದು ಏನು ಇಲ್ಲ 'ಶಾಸ್ತ್ರವನ್ನು' ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಂಡು ಬುದ್ಧಿಯನ್ನು ಉಪಯೋಗಿಸಿ ಪ್ರತ್ಯಕ್ಷ ಜ್ಞಾನದಿಂದ ತಿಳಿದುಕೊಳ್ಳಬೇಕಾದ ವಿಷಯವನ್ನು ಪ್ರತ್ಯಕ್ಷ ಜ್ಞಾನದಿಂದಲೇ ತಿಳಿದುಕೊಳ್ಳಬೇಕು" ಎನ್ನುವ ವಿಷಯವನ್ನು ತಿಳಿದುಕೊಂಡು ಹಿಂದಕ್ಕೆ ಹೋಗುತ್ತಾರೆ.

ಆದ್ದರಿಂದ ನಿಜವಾದ ಯೋಗಿ ಅಥವಾ ಆನಂದದಿಂದ ಇರುವಂತಹ ವ್ಯಕ್ತಿ ಇತರರಿಗೆ ಬೋಧಿಸುವಾಗ ಅಥವಾ ತನಗೆ ಬಂದಿರುವಂತಹ ಪ್ರಶ್ನೆಗಳಿಗೆ ಉತ್ತರ ಹೊಂದುತ್ತಿರುವಾಗ ಇತ್ತ ಪ್ರತ್ಯಕ್ಷ ಜ್ಞಾನವನ್ನು ಅದರಲ್ಲಿನ ಮೌಲ್ಯವನ್ನು, ಅದೇ ವಿಧವಾಗಿ ಅತ್ತ ಪರೋಕ್ಷ ಜ್ಞಾನವನ್ನು ಅದಕ್ಕೆ ಇರುವ ಮೌಲ್ಯವನ್ನು ಗಮನಿಸಿ ಆಯಾ ಸಮಯದಲ್ಲಿ ಅದನ್ನು ಪ್ರಯೋಗಿಸಿದಾಗ ಮಾತ್ರ ನಾವು ಸರಿಯಾದ ವಿಧವಾಗಿ ಮುಂದಕ್ಕೆ ಹೋಗಬಲ್ಲೆವು.

## ಅಂಧನ ರೀತಿ

“ಅದೊಂದನ್ನು ತಿಳಿದು ಮನಸ್ಸು ನಿಲ್ಲಿಸಿ –
ಅದು ಸಾಧ್ಯವಾದವನು ಅಭವನಾಗುವನು
ಅದು ಸಾಧ್ಯವಿಲ್ಲದಿದ್ದರೇ ಅಂಧರ ರೀತಿ
ವಿಶ್ವದಾಭಿರಾಮ ಕೇಳು ವೇಮ!”

**ತಾತ್ಪರ್ಯ:** “ಮೋಕ್ಷಕ್ಕೆ ಮೂಲವಾದ ಬ್ರಹ್ಮ ಸ್ವರೂಪವನ್ನು ತಿಳಿದುಕೊಂಡು, ಮನಸ್ಸು ನಿಲ್ಲಿಸಿ ಬ್ರಹ್ಮತ್ವವನ್ನು ಹೊಂದಬಹುದು; ಆ ವಿಧವಾಗಿ ಬ್ರಹ್ಮತ್ವವನ್ನು ಹೊಂದದ ಮನುಜನು ಕುರುಡನಿಗೆ ಸಮಾನನಾಗುವನು!”

**ವ್ಯಾಖ್ಯಾನ:** "ಅದು" ಅಂದರೆ ಮೂಲಚೈತನ್ಯ"! ಅಂದರೆ ಸಕಲ ಸೃಷ್ಟಿಗೆ ಜೀವ, ಚೈತನ್ಯರಾಶಿಗಳ ಸೃಷ್ಟಿಗೆ ಮೂಲವಾದದ್ದು. ಆ "ಅದು ಒಂದು ತಿಳಿದರೆ ಸಾಕು! ಆ "ಅದು" ನಾವೇ! ಎಂದು ತಿಳಿದುಕೊಳ್ಳುವುದರಲ್ಲೇ ಸರ್ವರೋಗ ನಿವಾರಿಣಿ, ಸರ್ವಭೋಗ ಲಾಲಸೆ, ಸರ್ವಜ್ಞಾನ ಸಮುಪಾರ್ಜನೆಗಳು ಇವೆ!

ಆ "ಅದು" ಎನ್ನುವುದನ್ನು ಅನುಭವ ಪೂರ್ವಕವಾಗಿ ಅರ್ಥೈಸಿಕೊಂಡು ಅದನ್ನು ಹೊಂದಿದವನು ಶಿವನಾಗುತ್ತಾನೆ, ಅಂದರೆ ಅಭವನಾಗುತ್ತಾನೆ." ಅ+ಭವ = "ಅವಿನಾಶಿ" ಎಂದು ಅರ್ಥ. ಆ ಒಂದು ಇಲ್ಲದಿದ್ದರೆ ಅವನು ಅಂಧನಿಗೆ ಸಮಾನ, ಅಂದರೆ ಸುತ್ತಲೂ ಇದ್ದುದ್ದನ್ನು ನೋಡಲಾಗದವನು! ಏನೂ ಆನಂದಿಸಲಾರದವನು!

ಹುಟ್ಟುಕುರುಡ ಅಂಗವೈಕಲ್ಯವಿಲ್ಲದ ಮನುಷ್ಯರಿಗೆ ಎಂತಹವನೋ, ಅಂತಹವನೇ ಯೋಗಿಗಳಿಗೆ ಆತ್ಮಜ್ಞಾನವಿಲ್ಲದ ಮನುಷ್ಯನು ಗೋಚರಿಸುತ್ತಾನೆ! ಹುಟ್ಟುಕುರುಡ ಈ ಲೋಕದ ಅಂದ ಚೆಂದವನ್ನು ಪ್ರತ್ಯಕ್ಷವಾಗಿ ನೋಡಿ ಆನಂದಿಸುವ, ಅನುಭವಿಸುವ, ಯೋಗ್ಯತೆ ಇಲ್ಲದವನು. ಅದೇ ವಿಧವಾಗಿ, ಆತ್ಮಜ್ಞಾನವಿಲ್ಲದ ಅಂಧರು ಕೋಟ್ಯಾನು ಕೋಟಿ ಲೋಕಗಳಿಂದ ತುಂಬಿರುವ

ಬ್ರಹ್ಮಾಂಡವನ್ನು ಪ್ರತ್ಯಕ್ಷವಾಗಿ ನೋಡಿ ಆನಂದಿಸುವ, ಅನುಭವಿಸುವ ಯೋಗ್ಯತೆ ಇಲ್ಲದವರು. ವ್ಯತ್ಯಾಸವೇನೆಂದರೆ ಒಬ್ಬ ಚರ್ಮಚಕ್ಷುಗಳಿಲ್ಲದ ಅಂಧ – ಇನ್ನೊಬ್ಬ ದಿವ್ಯಚಕ್ಷುವನ್ನು ಉತ್ತೇಜನಗೊಳಿಸದ ಅಂಧ!

# "ಸೋಲ್ ಸ್ಕಾನಿಂಗ್"

1. ಕಣ್ಣಿಗೆ ಸಂಬಂಧಿಸಿದ ಎಲ್ಲಾ ಸಮಸ್ಯೆಗಳಿಗೆ ಮೂಲಕಾರಣವೇನೆಂದರೆ ಜೀವನದಲ್ಲಿ, ಸಾಧನೆಯಲ್ಲಿ ಅತಿಮುಖ್ಯವಾದ ಪ್ರತ್ಯಕ್ಷ ಜ್ಞಾನ ಅಂದರೆ ಸ್ವಾನುಭವದ ಮೂಲಕ ಹೊಂದಬೇಕಾದ ಜ್ಞಾನದ ಕೊರತೆಯೇ!"

2. ಇತರ ಜ್ಞಾನೇಂದ್ರಿಯಗಳು (ಬಾಯಿ, ಮೂಗು, ಚರ್ಮ) ಮುಖ್ಯವಾಗಿ ಕಿವಿಗೆ ಸಂಬಂಧಿಸಿದ ಅನಾರೋಗ್ಯಗಳು ಪರೋಕ್ಷ ಜ್ಞಾನ (ಸಜ್ಜನ ಸಾಂಗತ್ಯ, ಸ್ವಾಧ್ಯಾಯ)ಕ್ಕೆ ಸಂಬಂಧಿಸಿದೆ ಎನ್ನುವ ವಿಷಯವನ್ನು ಗ್ರಹಿಸಿ ಅವುಗಳನ್ನು ಬೆಳೆಸಿಕೊಳ್ಳಬೇಕು.

3. ಶಾಸ್ತ್ರ ನಿರೂಪಣೆಗೋಸ್ಕರ ಕಂಡುಹಿಡಿದ ಅನೇಕ ಅಳತೆಗಳು, ಪ್ರಮಾಣಗಳು ಭೌತಿಕ ಪ್ರಪಂಚ ಪರವಾಗಿ ತಯಾರು ಮಾಡಿರುವಂತಹುದು. ಆಧ್ಯಾತ್ಮಿಕ ವಿಷಯಗಳನ್ನು ನಿರೂಪಿಸುವುದು ಎಲ್ಲಾ ಸಂದರ್ಭಗಳಲ್ಲೂ ಸರಿಯಲ್ಲ. ಪ್ರತ್ಯಕ್ಷ ಮತ್ತು ಪರೋಕ್ಷ ಅನುಭೂತಿಗಳ ಸಂಗಮದಿಂದಲೇ ನಿರೂಪಿಸಲು ಸಾಧ್ಯ ಎಂದು ಪ್ರತಿಯೊಬ್ಬ ಸಾಧಕನು ಗಮನಿಸಬೇಕು.

4. ಮನೆಯಲ್ಲಿ, ಹೊರಗೆ ಬಳಸುವ ಲೈಟ್, ಕನ್ನಡಿ, ಕನ್ನಡಕ, ಹಗಲಿನ ಅನುಭವಗಳು, ಟಿ.ವಿ. ಮೊದಲಾದವು ಪ್ರತ್ಯಕ್ಷ ಜ್ಞಾನದ ಸ್ಥಿತಿಯನ್ನು ನಮಗೆ ತಿಳಿಸುವ ಕೆಲವು ವಸ್ತುಗಳಾಗಿ ಪರಗಣಿಸಬೇಕು.

5. ಸೌಂಡ್ ಸ್ಪೀಕರ್, ಇಯರ್ ಫೋನ್, ಮೂಗಿನ ನತ್ತು, ಹೂವುಗಳು (ವಾಸನೆ) ಮೊದಲಾದವು ಪರೋಕ್ಷಾನುಭೂತಿಗೆ ಸಂಬಂಧಸಿದ ಸಂಕೇತಗಳಾಗಿ ಪರಿಗಣಿಸಬೇಕು.

6. ಎರಡನೆಯ ಶಕ್ತಿ ಕೇಂದ್ರ ಸ್ವಾಧಿಷ್ಟಾನಕ್ಕೆ ಸಂಬಂಧಿಸಿರುವ ಅನಾರೋಗ್ಯಗಳೆಲ್ಲದರಲ್ಲೂ ವ್ಯಕ್ತಿಯ ಪ್ರತ್ಯಕ್ಷ ಪರೋಕ್ಷ ಜ್ಞಾನಗಳ ಅನುಪಾತದ ವಿಧಾನಗಳನ್ನು ಗುರುತಿಸಿ ಸರಿ ಮಾಡುವುದರ ಮೂಲಕ ಅವುಗಳಿಂದ ಹೊರಬೀಳುವಂತೆ ಮಾಡಬಹುದು.

7. ಪ್ರತ್ಯಕ್ಷ ಜ್ಞಾನವಾಗಿ ತಿಳಿದುಕೊಳ್ಳಬೇಕಾದ ಕೆಲವು ವಿಷಯಗಳಿಗೆ ಉದಾಹರಣೆಗಳು..

- ಮೂರನೆಯ ಕಣ್ಣಿನ ಅನುಭವಗಳು

- ಹಿಂದಿನ ಜನ್ಮಗಳ ಅನುಭವಗಳು
- ಇತರ ಲೋಕಗಳು, ಪರಿಧಿಗಳನ್ನು ದರ್ಶಿಸುವುದು
- ಭವಿಷ್ಯತ್‌ನ ಯೋಜನೆಯನ್ನು ಧ್ಯಾನದ ಮುಖಾಂತರ, ಕನಸುಗಳ ಮುಖಾಂತರ ತಿಳಿಯುವುದು
- ಟ್ರೆಕ್ಕಿಂಗ್, ಪ್ರಕೃತಿಯಲ್ಲಿ ಜೀವಿಸುವುದು
- ಚಿಕ್ಕಮಕ್ಕಳೊಂದಿಗೆ ಪೂರ್ತಿಯಾಗಿ ಒಂದಾಗಿ ಇರುವುದು
- ಗುರುವಿನ ಸಾನ್ನಿಧ್ಯ
- ಅನಾರೋಗ್ಯವನ್ನು ತಮಗೆ ತಾವೇ ಧ್ಯಾನದ ಮೂಲಕ ಕಡಿಮೆ ಮಾಡಿಕೊಳ್ಳುವುದು
- ತಮಗೆ ಇರುವ ಜ್ಞಾನವನ್ನು ಇತರರಿಗೆ ಬೋಧಿಸುವುದು
- ಯಾವ ಕಲೆಯನ್ನಾದರೂ ಕಲಿತು ಅದನ್ನು ಅನುಭವಿಸುವುದು

8. ಪರೋಕ್ಷ ಜ್ಞಾನದಿಂದ ಹೊಂದುವ ವಿಷಯಗಳಿಗೆ ಕೆಲವು ಉದಾಹರಣೆಗಳು..

- "ಅಹಿಂಸಾ ಪರಮೋ ಧರ್ಮಃ" ಎನ್ನುವ ವಿಷಯ ತಿಳಿದ ಮೇಲೆ ಮಾಂಸಾಹಾರವನ್ನು ಬಿಟ್ಟು

ಸಸ್ಯಾಹಾರಿಗಳಾಗುವುದು.

· ಗುರು ಮುಖೇನ ಕೇಳಿದ ವಿಷಯಗಳು, ಆಜ್ಞೆಗಳನ್ನು ಶಿರಸಾವಹಿಸಿ ಒಡನೆಯೇ ಆಚರಣೆಗೆ ತರುವುದು.

· ಇತರರ ಧ್ಯಾನ ಅನುಭವಗಳನ್ನು ಕೇಳಿ ಅವುಗಳಿಗೆ ಅನುಗುಣವಾಗಿ ಕಡಿಮೆ ಸ್ಥಾಯಿ ಪರಿಣಿತಿಯ ನಂಬಿಕೆಯ ವ್ಯವಸ್ಥೆಯಿಂದ ಹೊರ ಬರುವುದು.

· ಅನೇಕ ಆಧ್ಯಾತ್ಮಿಕ ಶಾಸ್ತ್ರಜ್ಞರ ಗ್ರಂಥಗಳನ್ನು ಓದಿ ಕಂಠಸ್ಥಗೊಳಿಸಿ ಅದನ್ನು ಸ್ವಾನುಭವವಾಗಿ ಬದಾಲಾಯಿಸಿಕೊಂಡುಳ್ಳುವ ಹಾಗೆ ಗ್ರಹಿಸುವುದು. ಶಾಸ್ತ್ರ ಸಮ್ಮತವಾದ ವಿಷಯಗಳನ್ನು ದೂರ ತಳ್ಳುವ ತತ್ತ್ವದಿಂದ ಹೊರಬರಬೇಕು.

· ನಮ್ಮ ಜವಾಬ್ದಾರಿಯ ಮೇರೆಗೆ ನಮಗೆ ಬಂದ ಅವಕಾಶಗಳು, ನಾವು ಮಾತ್ರ ಮಾಡಬಲ್ಲಂತಹ ಪ್ರತ್ಯೇಕ ಯೋಜನೆಗಳು, ಕಾರ್ಯಕ್ರಮಗಳನ್ನು ಗುರುತಿಸಿ ಆಯಾ ವ್ಯಕ್ತಿಗಳೊಂದಿಗೂ, ಆಯಾ ಸಂದರ್ಭಗಳಲ್ಲೂ, ಸಂಘಟನೆಗಳಲ್ಲೂ ಕ್ರಮವಾಗಿ ಭಾಗವಹಿಸುವುದು.

· ಆಧ್ಯಾತ್ಮಿಕ ಶಿಕ್ಷಣ ಕಾರ್ಯಕಲಾಪಗಳು, ಪ್ರಾಪಂಚಿಕತೆಯಲ್ಲಿ ನಡೆಯುವ ವಿವಿಧ ಕಾರ್ಯಕ್ರಮಗಳಲ್ಲಿ

ವಿವಾಹಿತರಾಗಿಸುವ ವ್ಯಕ್ತಿಗಳೊಂದಿಗೆ ಬಲಗೈ ಬಂಟರಾಗಿರುವುದು.

· ಚಾಲಕನಿಂದ ಶಾಸಿಸುವವನು ಎನ್ನುವ 6 ಟ್ಯಾಬ್ಲೆಟ್‌ಗಳಲ್ಲಿನ ಅಂಶದಲ್ಲಿ 'ಶ್ರವಣ' ಎನ್ನುವುದು ಪರೋಕ್ಷಜ್ಞಾನಕ್ಕೆ ಪ್ರತೀಕವೆಂದು ತಿಳಿಯಬೇಕು. 'ಸಾಧಕ' ಎನ್ನುವವನು ಪ್ರತ್ಯಕ್ಷ ಜ್ಞಾನಕ್ಕೆ ಸಂಬಂಧಿಸಿದವನು.

· ಪ್ರಸ್ತುತ ಭೂಮಿಯ ಒಂದು ಆಧ್ಯಾತ್ಮಿಕ ಆಕಸ್ಮಿಕತೆಗೆ ಅನುಗುಣವಾಗಿ ಪ್ರತ್ಯಕ್ಷ ಜ್ಞಾನ, ಪರೋಕ್ಷ ಜ್ಞಾನಕ್ಕೆ ಉದಾಹರಣೆಗಳನ್ನು ಕೇವಲ ಆಧ್ಯಾತ್ಮಿಕ ಪ್ರಗತಿಗೆ ಸಂಬಂಧಿಸಿದೆ ಎಂದು ತಿಳಿಸಲಾಗಿದೆ. ಆದರೆ ಪ್ರಾಪಂಚಿಕ ಪರಿಧಿ ಮತ್ತು ಆಧ್ಯಾತ್ಮಿಕತೆ ಎರಡರಲ್ಲೂ ಕೂಡಾ ಎಲ್ಲೆಲ್ಲಿ ನಾವು ಜ್ಞಾನವನ್ನು ಆಯಾ ವಿಧಗಳಾಗಿ ಹೊಂದಬೇಕೋ ಹಾಗೆಯೇ ಹೊಂದುವಿಕೆ ಎನ್ನುವುದನ್ನು ಗ್ರಹಿಸಬೇಕು.

· ಅನೇಕ ಸಂದರ್ಭಗಳಲ್ಲಿ ಯಾವುದಾದರೂ ವಿಷಯಕ್ಕೆ ಸಂಬಂಧಿಸಿದಂತೆ ಪ್ರತ್ಯಕ್ಷ ಅನುಭವ ಹೊಂದವುದಕ್ಕೆ ಮುಂಚೆ ಆ ವಿಷಯದ ಮೇಲೆ ಇರುವ ಅನುಭವಗಳನ್ನು (ಪರೋಕ್ಷ ಜ್ಞಾನ) ಕೂಲಂಕುಷವಾಗಿ ತಿಳಿದುಕೊಂಡು, ಒಪ್ಪಿಕೊಂಡಾಗಲೇ ಆಯಾ ವಿಷಯಗಳಲ್ಲಿ ಸ್ವಾನುಭವವನ್ನು ಹೊಂದಬಲ್ಲೆವು ಎಂದು ಗ್ರಹಿಸಿಬೇಕು.

# "ಅನುಭವಗಳು"

1. ನನ್ನ ಹೆಸರು ಎಮ್.ಮಣಿ, ವಯಸ್ಸು 64. ನಮ್ಮದು ವಿಶಾಖಪಟ್ಟಣ. ನಾನು 2004ನೆಯ ವರ್ಷದಿಂದ ಧ್ಯಾನ ಮಾಡುತ್ತಿದ್ದೇನೆ. ಹಾಗೆಯೇ ಧ್ಯಾನ ಪ್ರಚಾರವನ್ನು ಮಾಡುತ್ತಿದ್ದೇನೆ. ಕಣ್ಣಿನ ಸ್ವಲ್ಪ ತೊಂದರೆಯಾಗಿ ಪರೀಕ್ಷೆ ಮಾಡಿಸಿ ಕೊಂಡರೆ ಗ್ಲೂಕೋಮಾ ವ್ಯಾಧಿ ಎಂದು ಹೇಳಿದರು. ಸಾಧರಣವಾಗಿ ಆರೋಗ್ಯದಲ್ಲಿ ರಕ್ತದೊತ್ತಡ ಹೇಗೋ ಹಾಗೆಯೇ ಕಣ್ಣಿನಲ್ಲಿ ಒತ್ತಡದ ಸಮಸ್ಯೆಯಿರುತ್ತದೆ. ಅದು 24/4 ಇತ್ತು. ಅದಕ್ಕೆ ಆಪರೇಷನ್ ಮಾಡುತ್ತೇವೆ ಆಗ ಕಡಿಮೆಯಾಗುತ್ತದೆ ಎಂದರು. ಆದರೂ ಜೀವನ ಪರ್ಯಂತ ಔಷಧಿಗಳು ಬಳಸಬೇಕು ಎಂದು ಡಾಕ್ಟರ್ ಹೇಳಿದರು.

ಕಣ್ಣಿನ ತೊಂದರೆಯೆಂದು ಭಯದಿಂದ ಆಪರೇಷನ್‌ಗೆ ಸಿದ್ಧಳಾದೆ. 'ಆಪರೇಷನ್' ಇನ್ನೊಂದು ಗಂಟೆಯಲ್ಲಿ ಮಾಡುತ್ತಾರೆ ಎಂದಾಗ ಜಿ.ಕೆ ಯವರಿಗೆ ಫೋನ್ ಮಾಡಿದೆ. ವಿಷಯವನ್ನು ತಿಳಿಸಿದಾಗ, ಅವರು ಒಂದು ವಾರ 'ಡಾರ್ಕ್ ರೂಂ' ಮೆಡಿಟೇಷನ್ ಮಾಡಿ ಎಂದರು. ಅಂದರೆ ಕೋಣೆಯನ್ನು ಕತ್ತಲೆಯಾಗಿ ಮಾಡಿಕೊಂಡು ಧ್ಯಾನ ಮಾಡುವುದು. ಹಾಗೆಯೇ ಕೆಲವು ಸಲಹೆಗಳನ್ನು ನೀಡಿದರು. ಹಾಗೆಯೇ ನಾನು ಡಾಕ್ಟರ್‌ಗೆ, "ನಮಗೆ ತುಂಬಾ ಬೇಕಾದವರ ಮನೆಯಲ್ಲಿ ಒಂದು ಶುಭಕಾರ್ಯವಿದೆ, ನಾನು

ಮತ್ತೆ ಬಂದು ಆಪರೇಷನ್ ಮಾಡಿಸಿಕೊಳ್ಳುತ್ತೇನೆ" ಎಂದು ಅಲ್ಲಿಂದ ಹೊರಬಂದೆನು.

ಆನಂತರ ನಮ್ಮ ಮನೆಯಲ್ಲಿ ಒಂದು ಕೋಣೆಯ ಬಾಗಿಲುಗಳನ್ನೆಲ್ಲಾ ಮುಚ್ಚಿ ಕತ್ತಲಲ್ಲಿ ಕಣ್ಣಿಗೆ ಪಿರಮಿಡ್ ಇಟ್ಟುಕೊಂಡು (eye pyramid) ಧ್ಯಾನವನ್ನು ಶುರುಮಾಡಿದೆನು. ಎರಡು ದಿನ ಸ್ವಲ್ಪ ಕಷ್ಟವಾಯಿತು, ಆದರೂ ಬಿಡದೇ ಒಂದು ವಾರ ಧ್ಯಾನ ಮಾಡಿದೆನು. ಈ ವಾರವೆಲ್ಲಾ ಕೇವಲ ದ್ರವಾಹಾರವನ್ನೇ ತೆಗೆದುಕೊಂಡೆನು. ಕಣ್ಣು ತೆರೆಯಲಿಲ್ಲ, ಹಾಸ್ಪಿಟಲ್‌ಗೆ ಹೋಗಿ ಕಣ್ಣಿನ ಪರೀಕ್ಷೆ ಮಾಡಿಕೊಂಡರೆ, 24/4 ರಿಂದ '14'ಕ್ಕೆ ಇಳಿದಿತ್ತು. ಡಾಕ್ಟರ್ ನನ್ನನ್ನು ನೋಡಿ ಎಲ್ಲಿಯಾದರೂ ಔಷಧಿಗಳನ್ನು ಬಳಸಿದರಾ?" ಎಂದು ಕೇಳಿದರು. ನಾನು ಆಗ 'ಧ್ಯಾನದ' ಬಗ್ಗೆ ಹೇಳಿದೆನು. ಅವರು ನಂಬಲಿಲ್ಲ. "ಮತ್ತೆ 15 ದಿನಕ್ಕೆ ಬನ್ನಿ ಆಗ ಮತ್ತೆ ಪರೀಕ್ಷಿಸೋಣ" ಎಂದರು. ಅದೇ ವಿಧವಾಗಿ 15 ದಿನಕ್ಕೆ ಹೋದೆನು. ಈ ಬಾರಿ ಕೂಡಾ ಕಣ್ಣಿನ ಒತ್ತಡ '14' ಇತ್ತು. ಆಗ ಡಾಕ್ಟರ್‌ಗೆ 25 ರೂಪಾಯಿಯ ಪಿರಮಿಡ್ ಕ್ಯಾಪ್, ಜಿ.ಕೆ. ಸಾರ್ ಬರೆದ ಪುಸ್ತಕಗಳನ್ನು ಕೊಟ್ಟು ಧ್ಯಾನ ಮಾಡಿಸಿದೆವು.

ಇದು ನನ್ನ ಅನುಭವ ಮಾತ್ರ! ಆ ಸಮಯದಲ್ಲಿ

ನನ್ನ ಆಲೋಚನಾ ವಿಧಾನ, ಜೀವಿಸುವ ವಿಧಾನ, ಮಾಡುವ ಕೆಲಸಗಳಲ್ಲಿ ಬದಲಾವಣೆ ಮಾಡಿಕೊಂಡು ಅದಕ್ಕೆ ಧ್ಯಾನ ಮತ್ತು ಪರಿಶ್ರಮ ಜೋಡಿಸುವುದರೊಂದಿಗೆ ನಾನು ಸಂಪೂರ್ಣ ಗುಣಮುಖಳಾಗಿ ಆಪರೇಷನ್‌ನಿಂದ ಹೊರಬಂದೆನು, ಸರಿಯಾದ ಸಮಯದಲ್ಲಿ ತಕ್ಕ ಸಲಹೆ, ಸೂಚನೆಗಳು ನೀಡಿದ ಜಿ.ಕೆ.ಯವರಿಗೆ, ಜಗದ್ಗುರು ಪತ್ರೀಜಿಯವರಿಗೆ ನನ್ನ ಕೃತಜ್ಞತೆಗಳು.

**ಆತ್ಮಸ್ಥೈರ್ಯ ಹೆಚ್ಚಾಯಿತು:** ನನ್ನ ಹೆಸರು ಧರ್ಮ ಗೌರಿ. ನಮ್ಮದು ವೈಜಾಗ್‌ನಲ್ಲಿರುವ 'ಅಕ್ಕಯ ಪಾಲೆಂ'. 2009ರಲ್ಲಿ ಧ್ಯಾನ ಪರಿಚಯವಾಯಿತು. ಆದರೆ 'ಧ್ಯಾನ' ಮಾಡಲಿಲ್ಲ. ನಂತರ ಜಿ.ಕೆ.ಯವರ ಪರಿಚಯವಾದಾಗಿನಿಂದ ಧ್ಯಾನ ಮಾಡುತ್ತಿದ್ದೇನೆ.

ನನಗೆ ಐದು ವರ್ಷ ವಯಸ್ಸಿನಲ್ಲಿ ಮೆಟ್ಟಿಲಿನಿಂದ ಬಿದ್ದು ತಲೆಗೆ ಏಟು ಬಿದ್ದಿದ್ದರಿಂದ, ಕಣ್ಣಿನ ನರಕ್ಕೆ ಪೆಟ್ಟಾಗಿ ಕಣ್ಣು ಸರಿಯಾಗಿ ಕಾಣದೇ ಹೋಯಿತು. ಆಗ ಜಿ.ಕೆ.ಯವರು ಮೂರು ತಿಂಗಳುಗಳ ಕಾಲ ದಿನಕ್ಕೆ ಎರಡು ಗಂಟೆಗಳು ಧ್ಯಾನ ಮಾಡು ಎಂದರು. ಪತ್ರಿ ಸಾರ್ ಸಿ.ಡಿ.ಗಳು, ಜಿ.ಕೆ.ರವರ ಸಿ.ಡಿ. 12 ಟ್ಯಾಬ್ಲೆಟ್ಸ್ ಕೇಳಿದೆನು. ಪಿರಮಿಡ್ ಧ್ಯಾನ, ಪೌರ್ಣಮಿ ಧ್ಯಾನ, ಸಾಮೂಹಿಕ ಧ್ಯಾನ ಮಾಡಿದೆನು. ದ್ರವ

ಪ್ರದಾರ್ಥಗಳನ್ನು ತೆಗೆದುಕೊಳ್ಳತ್ತಾ 'ಕತ್ತಲು ಕೋಣೆಯಲ್ಲಿ ಧ್ಯಾನ' 7 ದಿನಗಳಕಾಲ ಮಾಡಿದೆನು. ಎಷ್ಟೋ ಅನುಭವಗಳು ಬಂದವು. ಯಾವ ಜನ್ಮದಲ್ಲಿ ಮಾಡಿದ ಕರ್ಮಕ್ಕೆ ಈ ಜನ್ಮದಲ್ಲಿ ಅನುಭವಿಸುತ್ತಿದ್ದೆ. ಜಿ.ಕೆ. ಸಾರ್‌ರವರು, "ನಿನಗೆ ತಿಳಿಯದ ಜ್ಞಾನವನ್ನು ತಿಳಿದುಕೊಳ್ಳುತ್ತಾ ನಿನ್ನ ಬಳಿಯಿರುವ ಜ್ಞಾನವನ್ನು ಎಲ್ಲರಿಗೂ ಹಂಚು ಎಂದು ಹೇಳಿದರು. "ನನಗೆ 'ಆತ್ಮಜ್ಞಾನ', 'ಆತ್ಮಸ್ಥೈರ್ಯ', ಹೆಚ್ಚಾಗುತ್ತಾ ಬಂದಿತು. ನಾನು ನನ್ನ ಸಮಸ್ಯೆಯಿಂದ ನರಳದೇ 'ಆತ್ಮಜ್ಞಾನ' ತಿಳಿದುಕೊಂಡು ಆ ನೋವಿನಿಂದ ಹೊರಬಂದೆನು.

ನನಗೆ ಓದಲು ಅವಕಾಶವಿಲ್ಲದಿದ್ದರಿಂದ ಜಿ.ಕೆ.ಯವರ ಸಲಹೆ ತೆಗೆದುಕೊಂಡು ಸಂಗೀತದಲ್ಲಿ M.A. ಮಾಡಿದೆನು. ಈಗ ಸಂಗೀತದ ಕ್ಲಾಸ್‌ಗಳನ್ನು ಹೇಳುತ್ತಿದ್ದೇನೆ, ಪ್ರೋಗ್ರಾಂಗಳನ್ನು ನೀಡುತ್ತಿದ್ದೇನೆ. ನನಗೆ ಧ್ಯಾನವನ್ನು, ಆತ್ಮ ಜ್ಞಾನವನ್ನು ಬೋಧಿಸಿದ ಡಾಕ್ಟರ್ ಜಿ.ಕೆಯವರಿಗೆ ನನ್ನ ಆತ್ಮಪ್ರಣಾಮಗಳು.

2. ನನ್ನ ಹೆಸರು L. ವೆಂಕಟ ಪ್ರೇಮಾನಂದಾ ರೆಡ್ಡಿ. ನಮ್ಮದು ಕಡಪ ಜಿಲ್ಲೆಯ 'ಚಾಗಲೇರು ಗ್ರಾಮ. ನಾನು ಧ್ಯಾನವನ್ನು 2009ರಿಂದ ಮಾಡುತ್ತಿದ್ದೇನೆ. ನನಗೆ ಶ್ರವಣ ಸಮಸ್ಯೆ, ನೆಗಡಿ, ಆಸ್ತಮಾ, ಕೆಮ್ಮು ಮೊದಲಾದ ಅನಾರೋಗ್ಯ

ಸಮಸ್ಯೆಗಳಿತ್ತು. ಪ್ರತಿವಾರ ಡಾಕ್ಟರ್ ಬಳಿಗೆ ಹೋಗಿ 'ಪೆನ್ಸಿಲಿನ್' ಎನ್ನುವ ಇಂಜೆಕ್ಷನ್ ತೆಗೆದುಕೊಂಡು ಬರುತ್ತಿದ್ದೆ. ಅದರ ಹೊರತು ನನ್ನ ಶರೀರಕ್ಕೆ ಯಾವುದು ಸರಿಹೊಗುತ್ತಿರಲಿಲ್ಲ. ಈ ಜೀವನವೇ ಬೇಡ, ಈ ಸಮಾಜದಲ್ಲಿ ಹೇಗೆ ಜೀವನ ನಡೆಸುವುದು? ನನ್ನನ್ನು ನಾನು ಹೇಗೆ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದು? ನನ್ನ ತಂದೆ, ತಾಯಿ, ತಂಗಿ, ನೆರೆ–ಹೊರೆಯವರಿಗೆ ಯಾರಿಗೂ ನನ್ನನ್ನು ನೋಡಿದರೆ ಇಷ್ಟವಾಗುತ್ತಿರಲಿಲ್ಲ. ಹಾಗಿರುವಾಗ ನಾನೇಕೆ ಬದುಕಬೇಕು? ಎಂದುಕೊಳ್ಳುತ್ತಿದ್ದೆ. 10ನೆಯ ತರಗತಿಯವರೆಗೆ ಮೊದಲ ಸ್ಥಾನದಲ್ಲಿ ಇದ್ದ ನಾನು ಈ ಸಮಸ್ಯೆಗಳಿಂದ ಪಿ.ಯು.ಸಿ, ಡಿಗ್ರಿಗಳಲ್ಲಿ ಆರು ಸಬ್ಜೆಕ್ಟ್‌ಗಳೂ ಪಾಸಾಗುತ್ತಿರಲಿಲ್ಲ.

ಇನ್ನು ಆತ್ಮಹತ್ಯೆಗೆ ಶರಣಾಗಬೇಕು ಎನ್ನುವ ಆಲೋಚನೆಗಳು ಹೆಚ್ಚಾಗಿ ಬರುತ್ತಿದ್ದ ಸಮಯದಲ್ಲಿ ಒಂದು ದೇವಸ್ಥಾನದಲ್ಲಿ ಧ್ಯಾನಾಂದ್ರ ಪ್ರದೇಶ್ ಮಾಸ ಪತ್ರಿಕೆಯನ್ನು ನೋಡಿದೆ. ಆ ಪುಸ್ತಕ ಓದುತ್ತಿದ್ದಾಗ, "ಸಾಸಿವೆಯಷ್ಟು ಶ್ವಾಸ ಬೆಟ್ಟದಷ್ಟು ಬೆಳಕು" ಎನ್ನುವ ಸೂತ್ರ ನಾನು ಧ್ಯಾನ ಮಾಡಲು ಕಾರಣವಾಯಿತು. ಅದು ನನ್ನ ಜೀವನದ ಒಂದು ತಿರುವು.

ಬೆಂಗಳೂರು ಪಿರಮಿಡ್‌ನಲ್ಲಿ ಮೂರು ತಿಂಗಳು

ಧ್ಯಾನ ಮಾಡಿ ಎಷ್ಟೋ ಅನುಭವಗಳನ್ನು ಹೊಂದಿದೆನು. ಆನಂತರ ಡಾಕ್ಟರ್ ಜಿ.ಕೆ.ಯವರು, ತಿರುಪತಿ ಲಕ್ಷ್ಮಿ ಪ್ರಸೂನ ಮೇಡಮ್ ನಮಗೆ ಎಷ್ಟೋ ಸಲಹೆಗಳನ್ನು ನೀಡಿದರು. ಜಿ.ಕೆ.ಸಾರ್‌ರವರು 'ಭಾವನಾ ಶಕ್ತಿ', 'ನಿಮ್ಮ ಜೀವನ ನಿಮ್ಮ ಕೈಯ್ಯಲ್ಲಿ' ಪುಸ್ತಕಗಳನ್ನು ಓದಲು ಹೇಳಿದರು. ಅದು ಓದುತ್ತಿದ್ದಾಗ, ನನ್ನ ಆಲೋಚನಾ ವಿಧಾನ ಬದಲಾಯಿತು. ಈಗ ನಾನು ಓದಿನಲ್ಲಿ ಮೊದಲ ಸ್ಥಾನದಲ್ಲಿದ್ದು M.B.A ಪೂರ್ಣಗೊಳಿಸಿದೆನು. ಪ್ರಸ್ತುತ ಒಂದು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಧ್ಯಾನ ಮಾಡುವ ಮೊದಲು ಯಾರು ಏನು ಹೇಳಿದರೂ ನಾಲ್ಕೈದು ಸಾರಿ ಕೇಳಬೇಕಿತ್ತು. ಈಗ ಅದರ ಅವಶ್ಯಕತೆಯಿಲ್ಲದೇ ಬೇರೆಯವರು ಹೇಳಿದ್ದು ಕೇಳಿಸುತ್ತದೆ. ನನ್ನಲ್ಲಿ 'ಆತ್ಮಸ್ಥೈರ್ಯ' ಹೆಚ್ಚಾಗಿದೆ. ನನಗೆ ಈ ಅವಕಾಶವನ್ನು ನೀಡಿದ 'ಧ್ಯಾನ ಆರೋಗ್ಯ ಪ್ರಾಜೆಕ್ಟ್'ಗೆ ನನ್ನ ಕೃತಜ್ಞತೆಗಳು.

# "ಅನುಬಂಧ"

## ಧ್ಯಾನ ಆರೋಗ್ಯ ಶಾಸ್ತ್ರ ವಿಧಾನ

**ವಿವರಣೆ:** "ಪ್ರಪಂಚ ಆರೋಗ್ಯ ಸಂಸ್ಥೆ"ಯ ವಿವರಣೆಯ ಪ್ರಕಾರ ಶಾರೀರಿಕ, ಮಾನಸಿಕ, ಸಾಂಘಿಕ, ಆಧ್ಯಾತ್ಮಿಕಪರವಾದ ಅಡ್ಡಿಗಳೆಲ್ಲವನ್ನು ಸಮೂಲವಾಗಿ ಸ್ವಶಕ್ತಿಯಿಂದ ಪರಿಷ್ಕರಿಸಲು "ಸಸ್ಯಾಹಾರ" ಮತ್ತು "ಧ್ಯಾನ"ದಿಂದ ಪೂರ್ಣ ಸ್ಥಾಯಿಯ ಧ್ಯಾನ – ಜ್ಞಾನ ಶಿಕ್ಷಣವನ್ನು ನೀಡಿ ಇಂಗ್ಲೀಷ್ ವೈದ್ಯ, ಹೋಮಿಯೋ, ಆಯುರ್ವೇದ ಅಥವಾ ಇತರ ವೈದ್ಯ ವಿಧಾನಗಳೊಂದಿಗೆ "ಆತ್ಮಜ್ಞಾನ"ವೆನ್ನುವ ಟಾರ್ಚ್‌ಲೈಟ್ ಬೆಳಕಿನಲ್ಲಿ ಸಂಪೂರ್ಣ ಆರೋಗ್ಯವನ್ನು ಕೈಗೊಳ್ಳುವುದೇ ಧ್ಯಾನ ಆರೋಗ್ಯದ ಪ್ರಧಾನ ಉದ್ದೇಶ.

**ಸೂತ್ರಗಳು:**

1. ಜ್ಞಾನಾಗ್ನಿ ದಗ್ಧ ಕರ್ಮಾಣಾಂ! – **ಭಗವದ್ಗೀತೆ**

2. ವಾಕ್ಯವು ಸ್ವಸ್ಥತೆಯನ್ನು ನೀಡುವುದು! – **ಜೀಸಸ್ ಕ್ರೈಸ್ಟ್**

3. ಧ್ಯಾನದಿಂದ ಜ್ಞಾನ – ಜ್ಞಾನದಿಂದಲೇ ಮುಕ್ತಿ! – **ಪತ್ರೀಜಿ**

4. ನಮ್ಮ ಪಾಪಗಳೇ ನಮ್ಮ ರೋಗಗಳು! – **ಪತ್ರೀಜಿ**

# ರೋಗಿಗಳ ಸಮಸ್ಯೆಗಳು – ಸಂಸ್ಥೆಯ ಸೇವೆಗಳು

1. ಮೊದಲನೆಯದಾಗಿ "ಸಮಸ್ಯೆಗಳೆನ್ನುವವು ರೋಗಿಗಳು ಅವರಾಗಿಯೇ ಸೃಷ್ಟಿಸಿಕೊಳ್ಳುವಂತವು" ಎನ್ನುವ ವಿಷಯ ಅವರಿಗೆ ಅರ್ಥವಾಗುವಂತೆ ತಿಳಿಸಬೇಕು.

2. "ಸಮಸ್ಯೆಗಳು ಕೇವಲ ಅವರಿಂದ ಮಾತ್ರ ಪರಿಷ್ಕರಿಸಲಾಗುತ್ತವೆ. ಇತರರ ಮೇಲೆ ಆಧಾರವಾಗುವುದು ಸಮಸ್ಯೆಗಳನ್ನು ಮತ್ತಷ್ಟು ಜಟಿಲ ಮಾಡಿಕೊಳ್ಳುವಿಕೆಯೇ!" ಎಂದು ತಿಳಿಸಬೇಕು.

3. ರೋಗಿಗಳು ತಮ್ಮ ರೋಗವನ್ನು ಕಡಿಮೆಮಾಡಿಕೊಳ್ಳಲು ಮಾಡುವ ಪ್ರಯತ್ನದಲ್ಲಿ ಮಾನಸಿಕವಾಗಿ ತಮ್ಮ ಸಂಪೂರ್ಣ ಸಹಾಯ ಸಹಕಾರಗಳನ್ನು ನೀಡಬೇಕು.

4. ಆರೋಗ್ಯ ಶಾಸ್ತ್ರವನ್ನು ಪರಿಚಯಿಸುತ್ತಿದ್ದಾಗ, 'ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ'ರವರು ಪ್ರತಿಪಾದಿಸಿದ ವಿಷಯಗಳೆಲ್ಲವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು.

5. ಕೆಟ್ಟ ಕರ್ಮಗಳನ್ನು ದಗ್ಧ ಮಾಡುವುದರಲ್ಲಿ ಸಸ್ಯಾಹಾರದ ಪ್ರಮುಖ ಪಾತ್ರವನ್ನು ಪ್ರಜೆಗಳಿಗೆ ತಿಳಿಸುವುದು.

6. ಸಂಪೂರ್ಣ ಆರೋಗ್ಯ ಕೈಗೂಡಲು "ಪಿರಮಿಡ್ ಅದ್ಭುತಶಕ್ತಿ", "ಪಿರಮಿಡ್ ಧ್ಯಾನ"ದ ಪ್ರಮುಖ ಪಾತ್ರವನ್ನು ಕುರಿತು ಹೇಳಿ ಪ್ರಜೆಗಳನ್ನು ಚೈತನ್ಯವಂತರನ್ನಾಗಿ ಮಾಡುವುದು.

## ಧ್ಯಾನ ಆರೋಗ್ಯ ಪದ್ಧತಿ:

ಧ್ಯಾನ ಆರೋಗ್ಯ ಪದ್ಧತಿಯಲ್ಲಿ ಅನಾರೋಗ್ಯದಿಂದ ಇರುವ ಬಾಧಿತನನ್ನು ಪ್ರಧಾನವಾಗಿ, 'ಅಜ್ಞಾನದ ಪೊರೆಯಲ್ಲಿರುವ ಭಗವಂತನಾಗಿ' ವ್ಯವಹರಿಸಲಾಗುತ್ತದೆ. ಮೊದಲು ಧ್ಯಾನ ಆರೋಗ್ಯ ಕೇಂದ್ರ (ರೂರಲ್) ಅಥವಾ ರಿಯಲ್ ರಿಲೀಫ್ ಸೆಂಟರ್ (ಅರ್ಬನ್)ಗೆ ಬಂದ ರೋಗಿಗೆ 'ಧ್ಯಾನ ಆರೋಗ್ಯ ಪದ್ಧತಿ'ಯನ್ನು ಕುರಿತು Demo VCD ತೋರಿಸುವುದು ನಡೆಯುತ್ತದೆ. ರೋಗಿಗಳ ಸಂಪೂರ್ಣ ವಿವರಗಳು ದಾಖಲು ಮಾಡಿದ ನಂತರ 'ಧ್ಯಾನ'ವೆಂದರೆ "ಶ್ವಾಸದ ಮೇಲೆ ಗಮನ" ಎಂಬ ಪದ್ಧತಿಯನ್ನು ಕಲಿಸಲಾಗುತ್ತದೆ. ಸಸ್ಯಾಹಾರದ ವಿಶಿಷ್ಟತೆಯನ್ನು ತಿಳಿಸಿ 40 ದಿನಗಳ ಕಾಲ ಸಸ್ಯಾಹಾರ, ಧ್ಯಾನ ಮಾಡುವಂತೆ ಆತನನ್ನು ಆಗಾಗ ಪತ್ರಗಳ ಮೂಲಕ, ಫೋನ್ ಮೂಲಕ ಅವರ ಅಗತ್ಯಗಳಿಗೆ ಅನುಸಾರ ಹೋಂ ವಿಸಿಟ್‌ನಿಂದ ಅನುಸರಿಸಲಾಗುತ್ತದೆ. ಸ್ಪಿರಿಚ್ಯುವಲ್ – ಹೆಲ್ತ್ ಕೌನ್ಸಿಲಿಂಗ್ ಪ್ರತಿ 15 ದಿನಗಳಿಂದ 30 ದಿನಗಳ ಕಾಲದಲ್ಲಿ ನಿರ್ವಹಿಸುವುದು, ಆಚಾರ್ಯರ ಸಾಂಗತ್ಯ, ಸಾಮೂಹಿಕ

ಧ್ಯಾನ, ಅಖಂಡ ಧ್ಯಾನ, ಪಿರಮಿಡ್ ಧ್ಯಾನದಲ್ಲಿ ಪಾಲ್ಗೊಳ್ಳುವಂತೆ ಮಾಡಲಾಗುವುದು. ಪ್ರಧಾನ ಸೆಂಟರ್‌ಗೆ ದೂರವಾಗಿರುವ ರೋಗಿಗೆ ಹತ್ತಿರದಲ್ಲಿರುವ ಸೆಂಟರ್‌ಗಳ ವಿವರಗಳನ್ನು ತಿಳಿಸಲಾಗುವುದು. ಅದೇ ವಿಧವಾಗಿ ಕೌನ್ಸಿಲಿಂಗ್‌ನಲ್ಲಿ ಬರಹದ ಮೂಲಕ ಕೊಟ್ಟ ಸೂಚನೆಗಳು ಆಗಿಂದಾಗೆ ಆಚರಣೆಯಲ್ಲಿ ಇಡಲು ಅಗತ್ಯವಾದ ಪೂರ್ಣ ಸ್ಥಾಯಿ ಲೈಬ್ರರಿ, ಆಡಿಯೋ ವಿಜುವಲ್‌ನ ಸದುಪಾಯಗಳನ್ನು, ಎಲ್ಲಾ ವಿಧವಾದ ಪುಸ್ತಕಗಳು, ಪಿರಮಿಡ್‌ಗಳು ಲಭಿಸುವಂತೆ ಸೌಲಭ್ಯ ಮಾಡಲಾಗಿದೆ.

ಅದೇ ವಿಧವಾಗಿ 40 ದಿನಗಳ ಶಿಕ್ಷಣ ಪೂರ್ಣಗೊಂಡ ರೋಗಿಗಳಿಗೆ ಅವರವರ ಅನುಭವಗಳನ್ನು ಇತರರೊಂದಿಗೆ ಹಂಚಿಕೊಳ್ಳುವಂತೆ ಧ್ಯಾನ ಕ್ಲಾಸ್‌ಗಳಲ್ಲಿ ಅವಕಾಶವನ್ನು ನೀಡಲಾಗುತ್ತದೆ. ಆಗಿಂದಾಗೆ ಅಲೋಪತಿ, ಹೋಮಿಯೋಪತಿ, ಆಯುರ್ವೇದದಂತಹ ವೈದ್ಯವೃತ್ತಿಯ ಡಾಕ್ಟರ್‌ಗಳ ಮೂಲಕ ರೋಗಿಯ ವ್ಯಾಧಿ ತೀವ್ರತೆಯನ್ನು ಗುರುತಿಸಿ, ಅನಗತ್ಯವಾದ ಔಷಧಿಗಳನ್ನು ಕ್ರಮೇಣ ಕಡಿಮೆ ಮಾಡಲಾಗುವುದು. ರೋಗಿಗಳಿಗೆ ಅಗತ್ಯವೆನಿಸಿದರೆ ಸಂಗೀತ, ನೃತ್ಯದಂತಹ ಕಲೆಗಳಲ್ಲಿ ಪ್ರಾವಿಣ್ಯತೆಗೆ 'ಮ್ಯೂಸಿಕ್' ಮತ್ತು 'ನೃತ್ಯ'ದ ಕಲಿಕಾ ಸೆಂಟರ್‌ನ್ನು ಏರ್ಪಾಡು ಮಾಡಲಾಗಿದೆ.

# ಧ್ಯಾನ ಆರೋಗ್ಯ ಔಷಧಿಗಳ ಅಂಗಡಿ 350 ಆಧ್ಯಾತ್ಮಿಕ ಮಾತ್ರೆಗಳು

ಇತರ ವೈದ್ಯ ವಿಧಾನಗಳಲ್ಲಿ ಅನಾರೋಗ್ಯಕ್ಕೆ ನೀಡುವ ಮಾತ್ರೆಯ ರೀತಿಯಲ್ಲೇ ಇಲ್ಲಿ ಕೂಡಾ 350 ಆಧ್ಯಾತ್ಮಿಕ ಟ್ಯಾಬ್ಲೆಟ್ ತಯಾರು ಮಾಡಲಾಗಿದೆ. ಧ್ಯಾನ ಆರೋಗ್ಯ ಪ್ರಾಜೆಕ್ಟ ಒಟ್ಟಾರೆ ಇದನ್ನು ಹೃದಯವನ್ನಾಗಿ ಹೆಸರಿಸಬಹುದು. ಇವು ರೋಗಿಗಳಿಗೆ ಸುಲಭವಾಗಿ ಅರ್ಥವಾಗುವುದೇ ಅಲ್ಲದೆ ನಿತ್ಯ ಜೀವನದಲ್ಲಿ ಆತನಿಗೆ ಅಗತ್ಯವಾದಾಗ ಮತ್ತೆ ಮತ್ತೆ ಅದೇ ನೆನಪಿಗೆ ಬಂದು ತನ್ನ ಅರಿವಿನಲ್ಲಿ ಬದಲಾವಣೆ ತರುವಂತೆ ಸಿದ್ಧಗೊಳಿಸಿದ ಈ ಆಧ್ಯಾತ್ಮಿಕ ಮಾತ್ರೆಗಳು, ಕರಪತ್ರಗಳ ರೂಪದಲ್ಲಿ, ಆಡಿಯೊ ಸಿಡಿ/ಕ್ಯಾಸೆಟ್‌ಗಳ ರೂಪದಲ್ಲಿ ಸಿದ್ಧಗೊಳಿಸಲಾಗಿದೆ. ಇವುಗಳನ್ನು ರೋಗಿಗಳಿಗೆ ಅವರವರ ಅನುಭವಗಳಿಗೆ, ಅನುಸಾರವಾಗಿ ಸರಿಯಾಗಿ ನಿರ್ಣಯಿಸಿ ಕೊಡುವುದು 'ಲೈಫ್ ಹೆಲ್ತ್ ಕೌನ್ಸಿಲಿಂಗ್'ನಲ್ಲಿ ನಡೆಯುವ ಪ್ರಾಧಾನ ಪ್ರಕ್ರಿಯೆ.

ಅಜ್ಞಾನದಿಂದ, ಆಧ್ಯಾತ್ಮಿಕ ಬುದ್ಧಿ ಲೋಪದಿಂದ, ಅನಾರೋಗ್ಯದಿಂದ, ಸಮಸ್ಯೆಗಳಿಂದ, ಒತ್ತಡದಿಂದ ಬಂದ ರೋಗಿಗಳಿಗೆ ಸಸ್ಯಾಹಾರ, ಧ್ಯಾನ, ಆತ್ಮಜ್ಞಾನವೆನ್ನುವ ಭದ್ರ

ಬುನಾದಿಯೊಂದಿಗೆ ಪೂರ್ಣ ಸ್ವೇಚ್ಛೆಯಿಂದ ತನಗೆ ತಾನೇ ಎಲ್ಲಾ ಸಮಸ್ಯೆಗಳನ್ನು ಪರಿಷ್ಕರಿಸಿಕೊಳ್ಳುಲು ಅಗತ್ಯವಾದ ವಿಶ್ವಾಸವನ್ನು, ಶಕ್ತಿಯನ್ನು, ಆತ್ಮಜ್ಞಾನವನ್ನು ತಮಗೆ ತಾವಾಗಿಯೇ ಸಂಪಾದಿಸಿಕೊಳ್ಳಲು ಅಗತ್ಯವಾದ ವಾತಾವರಣವನ್ನು ಸೃಷ್ಟಿಸಿ ತಕ್ಕ ಸೂಚನೆಗಳು ಕೊಡುವುದರ ಮೂಲಕ ಎಂತಹ ರೋಗವನ್ನಾದರೂ ಕೊನೆಯ ಬೆರಳಿನಲ್ಲಿ ಕಿತ್ತೊಗೆಯ ಬಲ್ಲೆವು". ಈಗಾಗಲೇ ಕೆಲವು ಸಾವಿರ ಕೇಸುಗಳಲ್ಲಿ ಇದನ್ನು ನಿರೂಪಿಸಲಾಗಿದೆ.

**ಪಿರಮಿಡ್ ಧ್ಯಾನ ಆರೋಗ್ಯ ಕೇಂದ್ರದ ಸೌಲಭ್ಯಗಳು:**

- ಪ್ರತ್ಯೇಕವಾದ, ಶಕ್ತಿವಂತವಾದ ಪಿರಮಿಡ್ ಧ್ಯಾನ ಮಂದಿರ
- ಸಾಮೂಹಿಕ ಪಿರಮಿಡ್ ಧ್ಯಾನ ಮಂದಿರ
- ಸ್ಪಿರಿಚ್ಯುವಲ್ ಕೌನ್ಸಿಲಿಂಗ್ ಚೇಂಬರ್
- ಹೆಲ್ತ್ ಸೈನ್ಸ್ ಕ್ಲಾಸ್ ರೂಮ್
- ಮ್ಯೂಸಿಕ್ ಮತ್ತು ಡಾನ್ಸ್ ಲರ್ನಿಂಗ್ ಸೆಂಟರ್
- ಪಿರಮಿಡ್ ಬುಕ್ ಹೌಸ್ ಮತ್ತು ಲೈಬ್ರರಿ ನಿಪುಣರಾದ ವೈದ್ಯರ ಪರಿವೀಕ್ಷಣೆ

# ಧ್ಯಾನ ಆರೋಗ್ಯ

ಧ್ಯಾನ ಆರೋಗ್ಯ ಶಾಸ್ತ್ರ ವಿಧಾನದಿಂದ "350 ಆಧ್ಯಾತ್ಮಿಕ ಟ್ಯಾಬ್ಲೆಟ್‌ನ್ನು ಅಗತ್ಯಕ್ಕೆ ಅನುಗುಣ ಉಪಯೋಗಿಸುತ್ತಾ ಧ್ಯಾನ ಶಿಕ್ಷಣ, ಜ್ಞಾನಬೋಧೆ, ಸ್ಪಿರಿಚ್ಯುವಲ್ ಕೌನ್ಸಿಲಿಂಗ್, ಪಿರಮಿಡ್ ಶಕ್ತಿ, ಶಾಖಾಹಾರ, ಆಧ್ಯಾತ್ಮಿಕ ಸೇವೆ ಮತ್ತು ಕಲಿಯನ್ನು ಕಲಿಸುವದಂತಹ ಅನೇಕ ಅಂಶಗಳೊಂದಿಗೆ ವಿನೂತನ ರೀತಿಯಲ್ಲಿ ಪ್ರಪಂಚಕ್ಕೆ ಆನಂದಮಯ, ಆರೋಗ್ಯಮಯ ಜೀವನವನ್ನು ವಿಶೇಷವಾಗಿ ಪಿರಮಿಡ್ ಧ್ಯಾನ ಆರೋಗ್ಯ ಕೇಂದ್ರಗಳಲ್ಲಿ ನೀಡಲಾಗುತ್ತಿದೆ.

ಗಮನಿಸಿ: ಇದರಿಂದ ಶಿಕ್ಷಣ ಹೊಂದಬೇಕೆನ್ನುವವರು ಈ ಕೆಳಗಿನವನ್ನು ಸಂಪರ್ಕಿಸಿ

Phone : 9246648411, 9246648401

Mail : spiritualtablet@gmail.com

Skype : spiritual tablet workshop

www.spiritualtablet.org

ನಿಮ್ಮ ವಿಶೇಷ ಸಹಾಕಾವನ್ನು ನೀಡಬೇಕಾದ ವಿವರಗಳು:

ಶ್ರೀ ನಿತ್ಯಾನಂದ ಪಿರಮಿಡ್ ಸಹಜ ಧ್ಯಾನ ರೋಗ್ಯ ಸೇವಾ ಟ್ರಸ್ಟ್

S. ಕೋಟ, Regd.no, 10/2012

State bank of India A/C No. 32621885912

IFSC Code : SBIN0001005

Ph: 8332993938, 9246648411

ಪ್ರಪಂಚದಲ್ಲೇ ಪ್ರಪ್ರಥಮಬಾರಿಗೆ !
ಯಾವ ಪರೀಕ್ಷೆಯೂ ಇಲ್ಲದೇ !
ಯಾವ ಔಷಧಿಗಳನ್ನು ಒಳಸದೇ!
ಯಾವ ಆಪರೇಷನ್ ಇಲ್ಲದೆಯೇ ಸಂಪೂರ್ಣ ಆರೋಗ್ಯವನ್ನು ಹೊಂದುವ ಸುವಾರ್ಣಾವಕಾಶ

# ಪಿರಮಿಡ್ ಧ್ಯಾನ ಆರೋಗ್ಯ ಕೇಂದ್ರಗಳು

'ಧ್ಯಾನ ದಿಂದಲೇ ಸಂಪೂರ್ಣ ಆರೋಗ್ಯ'
'ಪೂರ್ಣ ಪ್ರಮಾಣದ ಧ್ಯಾನ-ಜ್ಞಾನ ಶಿಕ್ಷಣ'

ಹೈ.ಬಿ.ಪಿ, ಮಧುಮೇಹ, ಗರ್ಭಕೋಶದ ಖಾಯಿಲೆ ಗಳು, ಚರ್ಮ ವ್ಯಾಧಿಗಳು, ಆಸ್ತ್ಮಾ, ಸೈನಸೈಟಿಸ್, ಚಿಕ್ಕ ಚಿಕ್ಕ ಮಕ್ಕಳ ಸಮಸ್ಯೆಗಳು ಮೊದಲಾದ ಎಲ್ಲಾ ದೀರ್ಘಕಾಲಿಕ ವ್ಯಾಧಿಗಳನ್ನು ಧ್ಯಾನದ ಮೂಲಕ ತಮ್ಮ ಸ್ವಶಕ್ತಿಯಿಂದ ಕಡಿಮೆ ಮಾಡಿಕೊಳ್ಳಬಹುದು.

ಅರ್ಹತೆಯುಳ್ಳ ವೈದ್ಯರು ಮತ್ತು ಸೀನಿಯರ್ ಪಿರಮಿಡ್ ಮಾಸ್ಟರ್ಸ್
ಅಧ್ಯಕ್ಷತೆ ಯೊಂದಿಗೆ ಪ್ರಧಾನ ಕಾರ್ಯಾಲಯ:

**ಪಿರಮಿಡ್ ರಿಯಲ್ ರಿಲೀಫ್ ಸೆಂಟರ್**
**#17–1–15 ಛೇಂಬರ್ ನಂ:13, ಆರ್. ಆರ್. ಟವರ್ಸ್, ಕೆ.ಜಿ.ಹೆಚ್.ರೋಡ್,**
**ಮಹಾರಾಣಿ ವೇಟೆ, ವಿಶಾಖಪಟ್ಟಣ**
Phone: +91 92466 484401,
spiritualhealthcare2012@gmail.com

Spiritual Tablet

